**ದಿನಾಂಕಃ 04/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಜೆ ಡಿ ಆರ್ ರವರ ಪರ ಶ್ರೀ ಐ ಆರ್ ಎಸ್ ವಕೀಲರಿಂದಃ**

4. ಸ. ನಂ. 60 ರ 4 ಎಕರೆ 38 ಗುಂಟೆಯಲ್ಲಿ ತಿರುಗಾಡುವ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಕಳೆದ 60-70 ವರುಷಗಳಿಂದ ಜೆ ಡಿ ಆರ್ ರವರು ತಿರುಗಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಜೆ ಡಿ ಆರ್ ರವರು ಜಮೀನಿನಲ್ಲಿ ಉಳುಮೆ ಮಾಡಲು ಬಿಡದೇ ಬೇಲಿ ಕಿತ್ತು ಹಾಕಿ ಮಕ್ಕಳಿಗೆ ಹೊಡೆದು ಬಡಿದು ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಪೋಲೀಸರಿಗೆ ದುಹಾು ಸಲ್ಲಿಸಿ ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಸ್ವತ್ತುನಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸ್ವಾಧೀನಕ್ಕೆ ತೊಂದರೆ ನೀಡಿ ತಂತಿ ಬೇಲಿ ಕಿತ್ತು ಹಾಕಿ ವ್ಯವಸಾಯ ಕಾರ್ಯಕ್ಕೆ ತೊಂದರೆ ನೀಡಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜೆ ಡಿ ಆರ್ ರವರು ತೊಂದರೆ ನೀಡಿದ ಬಗ್ಗೆ ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವೇ ಜೆ ಡಿ ಆರ್ ರವರು ನಡೆದಾಡುವಂತಹ ರಸ್ತೆಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಬಿಡಿಸಿಕೊಳ್ಳಲು ನಾನು ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಜೆ ಡಿ ಆರ್ ರವರು ಯಾವುದೇ ಉಲ್ಲಂಘನೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ.**